









# ಕೈಹಿಡಿದ ಕೃಷಿ ಹವ್ಯಾಸ

ಚಿತ್ರ – ಲೇಖನ:
**ವಿ.ಬಾಲಕೃಷ್ಣ ಶಿರ್ವ**

ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉನ್ನತ ಹುದ್ದೆಯ ಕೆಲಸದಲ್ಲಿದ್ದವರು ಈಗೀಗ ಕೃಷಿ ಸಂಸ್ಕೃತಿಯತ್ತ ವಾಲುತ್ತಿದ್ದಾರೆ. ಕೃಷಿಯನ್ನು ವೃತ್ತಿಗಿಂತ ಹವ್ಯಾಸವಾಗಿ ತೆಗೆದುಕೊಂಡವರೇ ಹೆಚ್ಚು. ಹವ್ಯಾಸವನ್ನು ಗಂಭೀರವಾಗಿ ತೆಗೆದುಕೊಂಡವರೂ ಇದ್ದಾರೆ.

ನಿವೃತ್ತ ಬ್ಯಾಂಕ್ ಉದ್ಯಮಿ ಪ್ರದೀಪ ಸೂರಿ ಇದಕ್ಕೊಂದು ಉದಾಹರಣೆ. ಅವರು ದಕ್ಷಿಣ ಕನ್ನಡದ ಕುಳಾಯಿ (ಹೊಸಬೆಟ್ಟು)ಯಲ್ಲಿ ವಿಶೇಷ ಕೈತೋಟ ರೂಪಿಸಿ ಅದರಲ್ಲಿ ಉತ್ತಮ ಕೃಷಿ ಪ್ರಯೋಗಗಳನ್ನು ಮಾಡಿ ಗಮನ ಸೆಳೆದಿದ್ದಾರೆ. ಹಸಿರು ಸಾವಯವ ತರಕಾರಿ, ಹಣ್ಣು ಮತ್ತು ಸೊಪ್ಪುಗಳು ಇವರ ಪ್ರಮುಖ ಬೆಳೆಗಳು.

ಇವರು ಹದಿನಾಲ್ಕು ಸೆಂಟ್ಸ್ ಜಾಗವನ್ನು ಕೃಷಿಗಾಗಿಯೇ ಕೊಂಡುಕೊಂಡು ಕೈತೋಟ ರೂಪಿಸಿದ್ದಾರೆ. ಅದರಲ್ಲಿ ತೆಂಗು, ಅಡಿಕೆಯ ಜೊತೆಗೆ ಹೀರೆಕಾಯಿ, ಬಸಳೆ, ಪಪ್ಪಾಯಿ, ಪೇರಳೆ, ತೊಂಡೆ, ಹಳಸಂಡೆ, ಬೆಂಡೆ, ಸೌತೆ, ಬದನೆ, ಸಾಮ್ರಾಣಿ, ಸುವರ್ಣಗೆಡ್ಡೆ, ಹರಿವೆ, ಮೂಲಂಗಿ, ಬೀನ್ಸ್, ಹಸಿ ಮೆಣಸು... ಬೆಳೆಯುತ್ತಾರೆ. ತೋಟದಲ್ಲಿ ಬೆಳೆದ ಹುಲ್ಲನ್ನೇ ಕತ್ತರಿಸಿ ಗೊಬ್ಬರವನ್ನಾಗಿ ಪರಿವರ್ತಿಸಿಕೊಳ್ಳುವುದರ ಜೊತೆಗೆ ಗೋಮೂತ್ರ, ಸಗಣಿ ಗೊಬ್ಬರವನ್ನೂ ಬಳಸುತ್ತಾರೆ. ಇದನ್ನೆಲ್ಲ ಬಳಸಿ ಗ್ರೋ ಬ್ಯಾಗ್‌ನಲ್ಲಿ ಬೆಳೆದ ಮುಳ್ಳುಸೌತೆ, ಬೆಂಡೆಕಾಯಿ, ಆರೆಂಜ್ ಲೆಮನ್, ಹೂಕೋಸು, ಕ್ಯಾಬೇಜ್, ಕಂದುನೇರಳೆ, ಶುಂಠಿ, ಟೊಮೊಟೋ ಇವರ ಕೈತೋಟದಲ್ಲಿ ನಳನಳಿಸುತ್ತವೆ.

‘ಕಳೆದ ಒಂದು ದಶಕದಿಂದ ಯಾವುದೇ ತರಕಾರಿ ಕೊಂಡುಕೊಂಡಿಲ್ಲ. ಮನೆಗೆ ಸಾಕಾಗುವಷ್ಟು ತರಕಾರಿಯನ್ನು ಸ್ವತಃ ಬೆಳೆದುಕೊಳ್ಳುತ್ತೇವೆ. ಉಳಿಕೆಯಾದ ತರಕಾರಿಯನ್ನು ಸಾಹಿತ್ಯ ಕೇಂದ್ರ ಮಂಗಳೂರು ಸಾವಯವ ತರಕಾರಿ ಸಂತೆಯಲ್ಲಿ ಮಾರಾಟ ಮಾಡುತ್ತೇವೆ. ಕೃಷಿ ಚಟುವಟಿಕೆಯನ್ನು ಹವ್ಯಾಸವಾಗಿ ಸ್ವೀಕರಿಸುವುದರಿಂದ ದೈಹಿಕ ವ್ಯಾಯಾಮದ ಜೊತೆಗೆ ಮಾನಸಿಕ ನೆಮ್ಮದಿಯೂ ಸಿಗುತ್ತದೆ. ಅದಕ್ಕಾಗಿ ಜಿಮ್, ವಾಕಿಂಗ್ ಅಗತ್ಯವೇ ಬೀಳುವುದಿಲ್ಲ. ತಾಜಾ ಮತ್ತು ವಿಷರಹಿತ ಸಾವಯವ ತರಕಾರಿ ಸ್ವತಃ ಸವಿಯುವುದರ ಜೊತೆಗೆ ಇತರ ಗ್ರಾಹಕರಿಗೂ ಅವನ್ನು ತಲುಪಿಸುತ್ತಿದ್ದೇವೆ ಎಂಬ ಆತ್ಮ ತೃಪ್ತಿ ಸಿಗುತ್ತದೆ’ ಎನ್ನುತ್ತಾರೆ ಪ್ರದೀಪ್ ಸೂರಿ. ಹೆಚ್ಚಿನ ಮಾಹಿತಿಗೆ ಸೂರಿಯವರ ಮೊಬೈಲ್ ಸಂಖ್ಯೆ 9448871231 ಸಂಪರ್ಕಿಸಬಹುದು.